# ಡಾ. ಗೀತಾ ನಾಗಭೂಷಣ

ಕಾಪಸೆಯವರ ನಂತರ ೨೦೦೫ರಲ್ಲಿ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದವರು ಗೀತಾ ನಾಗಭೂಷಣ. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕನ್ನಡ ವಿಶ್ವವಿದ್ಯಾನಿಲಯದ ನಾಡೋಜ ಪ್ರಶಸ್ತಿ ಪುರಸ್ಕೃತರಾದ ಇವರು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಸ್ಥಾನಕ್ಕೆ ನೇಮಕಗೊಂಡ ಪ್ರಥಮ ಮಹಿಳೆ, ಕಾದಂಬರಿಕಾರರಾಗಿ ಗೀತಾ ನಾಗಭೂಷಣ ಚಿರಪರಿಚಿತರು.

೨೦೦೫ರಿಂದ ಅಕಾಡೆಮಿ ಅಧ್ಯಕ್ಷರಾದ ಗೀತಾ ನಾಗಭೂಷಣ ಅವರು ಹಲವಾರು ರಚನಾತ್ಮಕ ಕಾರ್ಯಕ್ರಮಗಳನ್ನು ಸಮರ್ಪಕವಾಗಿ ನೇರವೇರಿಸಿದ್ದಾರೆ. ಅನೇಕ ವಿಚಾರ ಸಂಕಿರಣಗಳು ನಾಡಿನ ವಿವಿಧೆಡೆ ನಡೆದು ಅವುಗಳಲ್ಲಿ ಹಿರಿಯ ಸಾಹಿತಿಗಳು ಗಣ್ಯರು, ಚಿಂತಕರು ಪಾಲ್ಗೊಂಡಿದ್ದಾರೆ.

ಶಿವಮೊಗ್ಗದಲ್ಲಿ ಅಕಾಡೆಮಿಯು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಹಯೋಗದೊಂದಿಗೆ ಕನ್ನಡ ಸಾಹಿತ್ಯ ಮತ್ತು ಸಮೂಹ ಮಾಧ್ಯಮ ಕಾರ್ಯಕ್ರಮ ಹಮ್ಮಿಕೊಂಡಿತ್ತು. ಮಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದೊಂದಿಗೆ ಮಂಗಳ ಗಂಗೋತ್ರಿಯಲ್ಲಿ ' ಸಾಹಿತ್ಯ ಮೀಮಾಂಸೆ' ಕುರಿತ ೨ ದಿನಗಳ ವಿಚಾರ ಸಂಕಿರಣವನ್ನು ಅಕಾಡೆಮಿ ಹಮ್ಮಿಕೊಂಡಿತ್ತು.

ಮಂಡ್ಯದಲ್ಲಿ ಸಾಹಿತ್ಯ ಪರಿಷತ್ತು ಹಾಗೂ ಪಿ.ಇ.ಎಸ್ ಕಾಲೇಜ್ ಆಶ್ರಯದಲ್ಲಿ 'ಪುತಿನ ನೂರರ ನೆನಪು' ವಿಚಾರ ಸಂಕಿರಣ, ಕವಿಗೋಷ್ಠಿಯನ್ನು ಹಮ್ಮಿಕೊಳ್ಳಲಾಯಿತು. ಇದನ್ನು ಉದ್ಘಾಟಿಸಿದ ಸಾಹಿತಿ ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯ, 'ನವೋದಯ ರತ್ನತ್ರಯರಾದ ಕುವೆಂಪು ಮಲೆನಾಡಿನ ಪ್ರತಿಭೆ, ಬೇಂದ್ರ ಶ್ರಾವಣ ಪ್ರತಿಭೆ ಹಾಗೂ ಪುತಿನ ಕೃಷ್ಣನ ಪ್ರತಿಭೆ' ಎಂದು ಅಭಿಪ್ರಾಯಪಟ್ಟರು. ಈ ಸಂಕಿರಣ ಹಾಗೂ ಕವಿಗೋಷ್ಠಿಗಳ ಅಧ್ಯಕ್ಷತೆ ವಹಿಸಿದ್ದ ಗೀತಾ ಅವರು 'ಮಡಿವಂತಿಕೆಯಿಂದ ಭಾಷಾ ಬೆಳವಣಿಗೆ ಸಾಧ್ಯವಿಲ್ಲ' ಎಂದು ಪ್ರತಿಪಾದಿಸಿದರು.

ಮೈಸೂರಿನಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಸಂಯುಕ್ತ ಆಶ್ರಯದಲ್ಲಿ 'ದಲಿತ ಸಾಹಿತ್ಯ ಮತ್ತು ಮೊದಲ ತಲೆಮಾರಿನ ಲೇಖಕರು' ಎಂಬ ವಿಚಾರ ಸಂಕಿರಣವನ್ನು ಹಮ್ಮಿಕೊಂಡಿತ್ತು. ಹಾಸನದಲ್ಲಿ ಹೇಮ ಗಂಗೋತ್ರಿ ಹಾಗೂ ಮೈಸೂರು ವಿವಿ ಸಂಯುಕ್ತ ಆಶ್ರಯದಲ್ಲಿ ಅಕಾಡೆಮಿಯು ಕವಿಗೋಷ್ಠಿ ಹಾಗೂ ವಿಚಾರ ಸಂಕಿರಣ ಏರ್ಪಡಿಸಿತ್ತು. ದಾವಣಗೆರೆಯಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನೊಂದಿಗೆ 'ಕನ್ನಡ ಸಾಹಿತ್ಯ ಮತ್ತು ಜನಪರ ಚಳುವಳಿ' ವಿಚಾರ ಸಂಕಿರಣವನ್ನು ಆಯೋಜಿಸಲಾಗಿತ್ತು.

ಬಳ್ಳಾರಿಯಲ್ಲಿ ಸಾಹಿತ್ಯ ಅಕಾಡೆಮಿಯು ವಿವಿಧ ಲೇಖಕರ ಕೃತಿಗಳಲ್ಲಿ ಸ್ತ್ರೀಪರ ಕಾಳಜಿಗೆ ಸಂಬಂಧಿಸಿದ 'ನಮ್ಮ ಕಣ್ಣಲ್ಲಿ ನೀವು' ಎಂಬ ೨ ದಿನಗಳ ವಿಚಾರ ಸಂಕಿರಣವನ್ನು ನಡೆಸಿತು.

ಕುಂದಾಪುರದಲ್ಲಿ ಜನಪ್ರತಿನಿಧಿ ಪತ್ರಿಕೆ ಇವರೊಂದಿಗೆ ೪ ದಿನಗಳ ಕಥಾ ಕಮ್ಮಟವನ್ನು ಯುವ ಕಥೆಗಾರರಿಗೆ ಅಕಾಡೆಮಿ ನಡೆಸಿತು.
ರಾಮನಗರ ತಾಲ್ಲೂಕಿನ ಅವ್ವೇರಹಳ್ಳಿಯ ರೇವಣಸಿದ್ದೇಶ್ವರ ಬೆಟ್ಟದಲ್ಲಿ ಕೆ.ಎಸ್.ಎಂ ಟ್ರಸ್ಟ್ ಸಹಯೋಗದೊಂದಿಗೆ 'ಕಾವ್ಯ ಬೆಳದಿಂಗಳು" ಎಂಬ ರಾಜ್ಯಮಟ್ಟದ ಕವಿ ಸಮ್ಮೇಳನವನ್ನು ಹಮ್ಮಿಕೊಳ್ಳಲಾಗಿತ್ತು.

ಗೀತಾ ನಾಗಭೂಷಣ ನೇತೃತ್ವದ ಸಾಹಿತ್ಯ ಅಕಾಡೆಮಿಯು ಮಹಿಳೆಯರ ಕ್ಷೇಮಾಭಿವೃದ್ಧಿಗೆ ಸಂಬಂಧಿಸಿದ ಸಾಹಿತ್ಯ ರಚನೆಯ ಬಗ್ಗೆ ಅರಿವು ಮೂಡಿಸುವೆಡೆಗೂ ಹೆಚ್ಚು ಒತ್ತು ಕೊಟ್ಟಿದೆ. ಮೂಡುಬಿದರೆಯಲ್ಲಿ ಅಕಾಡೆಮಿಯು ಆಳ್ವಾಸ್ ಶಿಕ್ಷಣ ಸಂಸ್ಥೆಯೊಂದಿಗೆ ವಿದ್ಯಾರ್ಥಿನಿಯರಿಗಾಗಿ ರಾಜ್ಯ ಮಟ್ಟದ ೬ ದಿನಗಳ ಮಹಿಳಾ ಸಾಹಿತ್ಯ ಅಧ್ಯಯನ ಶಿಬಿರವನ್ನು ಏರ್ಪಡಿಸಿತ್ತು.

ನಾಡಿನ ಕೆಲವು ಹಿರಿಯ ಸಾಹಿತಿಗಳ ಸ್ಮರಣೆಯ ಕಾರ್ಯಕ್ರಮವನ್ನು ಅಕಾಡೆಮಿ ಈ ಅವಧಿಯಲ್ಲಿ ಹಮ್ಮಿಕೊಂಡಿತ್ತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ಸಾಹಿತಿ ಡಾ.ಆರ್.ಶಿವರಾಂ (ರಾಶಿ) ಜನ್ಮ ಶತಮಾನೋತ್ಸವ ಅಂಗವಾಗಿ ಅವರ ಸಮಗ್ರ ಸಾಹಿತ್ಯ ಕುರಿತು ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು.

ನಾಡಿನ ಕೆಲವು ಹಿರಿಯ ಸಾಹಿತಿಗಳ ಸ್ಮರಣೆಯ ಕಾರ್ಯಕ್ರಮವನ್ನು ಅಕಾಡೆಮಿ ಈ ಅವಧಿಯಲ್ಲಿ ಹಮ್ಮಿಕೊಂಡಿತ್ತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ಸಾಹಿತಿ ಡಾ.ಆರ್.ಶಿವರಾಂ (ರಾಶಿ) ಜನ್ಮ ಶತಮಾನೋತ್ಸವ ಅಂಗವಾಗಿ ಅವರ ಸಮಗ್ರ ಸಾಹಿತ್ಯ ಕುರಿತು ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು.

ಅದೇ ರೀತಿ ಎಲ್.ಗುಂಡಪ್ಪ ಅವರ ಜನ್ಮ ಶತಮಾನೋತ್ಸವವನ್ನು ಹಮ್ಮಿಕೊಳ್ಳಲಾಗಿತ್ತು.
ಹಾಸನದಲ್ಲಿ ಅಕಾಡೆಮಿಯಲ್ಲಿ ಎ.ಎನ್.ವಿ ಪ್ರಥಮ ದರ್ಜೆ ಕಾಲೇಜಿನೊಂದಿಗೆ ಡಾ॥ ಗೊರೂರು ರಾಮಸ್ವಾಮಿ ಅಯ್ಯಂಗಾರ ಅವರ ಜನ್ಮಶತಮಾನೋತ್ಸವವನ್ನು ಆಚರಿಸಿತು.